# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೨, ಫೆಬ್ರವರಿ, ೨೦೨೨( ಫಾಲ್ಗುಣ, ೦೩, ಶಕವರ್ಷ, ೧೯೪೩)<br>BENGALURU, TUESDAY, 22, FEBRUARY, 2022 ( PHALGUNA, 03, SHAKAVARSHA, 1943) | ನಂ. ೮೫<br>No. 85 |
|---|---|---|

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಪಿ 89 ಪಿಬಿಎಸ್ 2021 (ಭಾ–1)

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22–02–2022.

**ಅಧಿಸೂಚನೆ**

ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು, 2022 ಸಂಬಂಧಿಸಿದಂತೆ ಮುಂದಿನಂತೆ ತಿದ್ದುಪಡಿ ಮಾಡಲು ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ –1978 (ಕರ್ನಾಟಕ ಅಧಿನಿಯಮ–1990ರ ನಿಯಮ–14) ರ ನಿಯಮ 3 ಉಪ ನಿಯಮ (1)ರೊಂದಿಗೆ ಸೆಕ್ಷನ್ 8 ರಂತೆ ಕರ್ನಾಟಕ ಸರ್ಕಾರದಿಂದ ಪ್ರದತ್ತವಾದ ಅಧಿಕಾರದನ್ವಯ ತಿಳಿಸಲಾದ ಅಧಿನಿಯಮಕ್ಕೆ ಸೆಕ್ಷನ್–3 ರ ಉಪ ನಿಯಮ (2)ಕ್ಕೆ Clause (a) ರ ಕರಡು ನಿಯಮಗಳನ್ನು ಅದರಿಂದ ಬಾಧಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ:21.01.2022 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಬಾಧಿತರಾಗುವ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, ಸದರಿ ನಿಯಮಗಳ ಕರಡು ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಹದಿನೈದು ದಿನಗಳ ಒಳಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಕರಡು ಅಧಿಸೂಚನೆಗೆ ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಶೀಲಿಸಿ ಪರಿಗಣಿಸಿದೆ.

ಈಗ ಕರ್ನಾಟಕ ಸರ್ಕಾರವು, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ಕ್ಕೆ ಸಂಬಂಧಿಸಿದಂತೆ ಮುಂದಿನಂತೆ ತಿದ್ದುಪಡಿ ಮಾಡಲು ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ–1978 (ಕರ್ನಾಟಕ ಅಧಿನಿಯಮ–1990 ನಿಯಮ 14) ರ ನಿಯಮ 3 ಉಪನಿಯಮ (1) ರೊಂದಿಗೆ ಸೆಕ್ಷನ್ 8 ರಂತೆ ಕರ್ನಾಟಕ ಸರ್ಕಾರದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿರುತ್ತದೆ. ಎಂದರೆ :–

## ವಿಶೇಷ ನಿಯಮಗಳು

### 1. ಶೀರ್ಷಿಕೆ ಪ್ರಾರಂಭ ಮತ್ತು ಅನ್ವಯ:–

(1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ರಾಜ್ಯ ಸರ್ಕಾರದ ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೊಳಿಸತಕ್ಕದ್ದು.

(3) ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ಅಥವಾ ಕರ್ನಾಟಕ ಶಿಕ್ಷಣ ಇಲಾಖೆಯ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು 1967ಕ್ಕೆ ಅಥವಾ ಕರ್ನಾಟಕ ರಾಜ್ಯ ನಾಗರಿಕ ಸೇವಾ ಕಾಯಿದೆ 1978 (1990 ರ ಕರ್ನಾಟಕ ಕಾಯಿದೆ 14) ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ಪರಿಗಣಿಸಲಾದ ಶೆಡ್ಯೂಲ್‌ನಲ್ಲಿ (Shedule) ನಿರ್ದಿಷ್ಟಪಡಿಸಿದ ಹುದ್ದೆಗಳ ವರ್ಗಗಳಿಗೆ ಸಂಬಂಧಿಸಿದ ಯಾವುದೇ ಇತರೆ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಈ ನಿಯಮಗಳಲ್ಲಿ ಯಾವುದೂ ಒಂದಕ್ಕಿಂತ ಹೆಚ್ಚು ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ.

### 2. ವ್ಯಾಖ್ಯೆಗಳು:– (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು

(ಎ) ''ನೇಮಕಾತಿ ಪ್ರಾಧಿಕಾರ'' ಎಂದರೆ, ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು.

(ಬಿ) ''ಪರೀಕ್ಷಾ ಪ್ರಾಧಿಕಾರ'' ಎಂದರೆ, ಸರ್ಕಾರದ ಆದೇಶದ ಸಂಖ್ಯೆ: ಇಡಿ 399 ಪಿಬಿಎಸ್ 2017(2) ದಿನಾಂಕ:22.08.2017 ರ ಪ್ರಕಾರ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು ರವರು.

(ಸಿ) ''ಅರ್ಹತಾ ಪರೀಕ್ಷೆ'' ಎಂದರೆ ಶೆಡ್ಯೂಲ್ ನಲ್ಲಿ ನೇಮಕಾತಿಗೆ ನಿರ್ದಿಷ್ಟಪಡಿಸಿದ ಹುದ್ದೆಗೆ ಹೊಂದಿರಬೇಕಾದ ಕನಿಷ್ಟ ವಿದ್ಯಾರ್ಹತೆ.

(ಡಿ) ''ಶೆಡ್ಯೂಲ್'' ಎಂದರೆ ಸದರಿ ನಿಯಮಗಳಿಗೆ ಲಗತ್ತಿಸಲಾದ ವಿವರಗಳ ಪಟ್ಟಿ.

(ಇ) ''ಖಾಲಿಹುದ್ದೆಗಳು'' ಈ ನಿಯಮಗಳ ಅಡಿಯಲ್ಲಿ ಭರ್ತಿ ಮಾಡಬೇಕಾದ ಕೋಷ್ಟಕ (ಶೆಡ್ಯೂಲ್) ದಲ್ಲಿ ನಿರ್ದಿಷ್ಟಪಡಿಸಿದ ಖಾಲಿ ಹುದ್ದೆಗಳ ಸಂಖ್ಯೆ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ವಾಖ್ಯಾನಿಸದ ಪದಗಳು ಮತ್ತು ಆಭಿವ್ಯಕ್ತಿಗಳು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ಶಿಕ್ಷಣ ಇಲಾಖೆಯ ಸೇವೆಗಳಲ್ಲಿ (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು 1967 ರಲ್ಲಿ ಅದೇ ಅರ್ಥವನ್ನು ಹೊಂದಿವೆ.

### ೩. ವಯೋಮಿತಿ:– ಅಭ್ಯರ್ಥಿಯು ಕನಿಷ್ಟ 21 ವರ್ಷ ಪೂರೈಸಿರಬೇಕು ಮತ್ತು ಕೆಳಕಂಡ ವಯೋಮಿತಿಯನ್ನು ಮೀರಿರಬಾರದು.

(i) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ವಿಕಲಚೇತನ ಅಭ್ಯರ್ಥಿಗಳಿಗೆ 47 ವರ್ಷ ಮೀರಿರಬಾರದು.

(ii) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗದ ಅಭ್ಯರ್ಥಿಗಳಿಗೆ 45 ವರ್ಷ ಮೀರಿರಬಾರದು.

(iii) ಸಾಮಾನ್ಯ (others) ಅಭ್ಯರ್ಥಿಗಳಿಗೆ 42 ವರ್ಷ ಮೀರಿರಬಾರದು.

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರ ಉಪ ನಿಯಮ (2) ಮತ್ತು (3) ರಲ್ಲಿ ಒದಗಿಸಲಾದ ವಯಸ್ಸಿನ ಮಿತಿಯ ಸಡಿಲಿಕೆಯು ಈ ನಿಯಮಗಳ ಅಡಿಯಲ್ಲಿ ನೇಮಕಾತಿಗೆ ಅನ್ವಯಿಸುತ್ತದೆ.

4. **ಪರೀಕ್ಷಾ ಪ್ರಾಧಿಕಾರ:–** ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಆಯ್ಕೆ ಪ್ರಾಧಿಕಾರವಾಗಿದ್ದು, ಕೆಳಕಂಡ ಸಲಹಾ ಸಮಿತಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

(i) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ – ಅಧ್ಯಕ್ಷರು

(ii) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ – ಸದಸ್ಯರು;

(iii) ನಿರ್ದೇಶಕರು (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ – ಸದಸ್ಯರು;

(iv) ನಿರ್ದೇಶಕರು ಡಿ.ಎಸ್.ಇ.ಆರ್.ಟಿ– ಸದಸ್ಯರು;

(v) ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ – ಸದಸ್ಯ ಕಾರ್ಯದರ್ಶಿ

(vi) ರಾಜ್ಯ ಮಾಹಿತಿ ಅಧಿಕಾರಿ, NIC ಬೆಂಗಳೂರು – ಸದಸ್ಯರು

(vii) ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ಬೆಂಗಳೂರು – ಸದಸ್ಯರು; ಮತ್ತು

(viii) ಆಯುಕ್ತರಿಂದ ನಾಮನಿರ್ದೇಶಿತರಾದ ಇಬ್ಬರು DIET ಪ್ರಾಂಶುಪಾಲರು ಮತ್ತು ಇಬ್ಬರು ಜಿಲ್ಲಾ ಉಪನಿರ್ದೇಶಕರು (ಆಡಳಿತ) – ಸದಸ್ಯರು

5. **ನೇಮಕಾತಿ ವಿಧಾನ:–** ಈ ನಿಯಮಗಳ ಅಡಿಯಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಆಯ್ಕೆ ಪ್ರಾಧಿಕಾರವು ಕೆಳಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮಾಡಲಾಗುತ್ತದೆ.

(ಎ) ಸರ್ಕಾರಿ ಆದೇಶದಲ್ಲಿ ಸೂಚಿಸಿದಂತೆ ಕ್ರಮ ಸಂಖ್ಯೆ 66–ಎ ನ (i) ರಿಂದ (iii) ಕಾಲಂ 2 ರಲ್ಲಿನ ವರ್ಗದ ಹುದ್ದೆಗಳಿಗೆ ಹಾಗೂ ಬೋಧನಾ ಮಾಧ್ಯಮಾನುಸಾರ ಪ್ರತಿ ಜಿಲ್ಲೆಯಲ್ಲಿ ಲಭ್ಯ ಖಾಲಿ ಹುದ್ದೆಗಳನ್ನು ಪರಿಗಣಿಸಿ ಆಯಾ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರು ಅಥವಾ ತತ್ಸಮಾನ ವೃಂದದ ಅಧಿಕಾರಿಗಳು ಸರ್ಕಾರದ ಪರವಾಗಿ (ಇನ್ನು ಮುಂದೆ ಆಯ್ಕೆ ಪ್ರಾಧಿಕಾರ ಎಂಬುದಾಗಿ ತಿಳಿಯತಕ್ಕದ್ದು) ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವುದು ಹಾಗೂ ವ್ಯಾಪಕ ಪ್ರಸಾರವುಳ್ಳ ಕನಿಷ್ಟ ಪ್ರಮುಖ 02 ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ. ಅರ್ಹ ಅಭ್ಯರ್ಥಿಗಳಿಂದ ನಿಗದಿತ ಶುಲ್ಕದೊಂದಿಗೆ ನೇಮಕಾತಿಗಾಗಿ ನಿಯಮಾವಳಿಯನ್ವಯ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು.

(ಬಿ) ಆಯ್ಕೆ ಪ್ರಾಧಿಕಾರವು ಪರೀಕ್ಷಾ ಪ್ರಾಧಿಕಾರದ ನೆರವಿನೊಂದಿಗೆ ಸರ್ಕಾರವು ನಿರ್ದಿಷ್ಟಪಡಿಸುವ ಕಾರ್ಯ ವಿಧಾನಕ್ಕೆ ಅನುಗುಣವಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವುದು. ಆಯ್ಕೆ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಪಠ್ಯಕ್ರಮ, ದಿನಾಂಕ, ಸಮಯ ಮತ್ತು ಸ್ಥಳ ಮುಂತಾದ ಅಗತ್ಯ ವಿವರಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಬೇಕು.

(ಸಿ) ಕರ್ನಾಟಕ ಶಿಕ್ಷಣ ಇಲಾಖೆಯ ಸೇವೆಗಳ (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು 1967 ರ ಶೆಡ್ಯೂಲ್ ನ ಕಾಲಂ 2 ರ ಕ್ರಮ ಸಂಖ್ಯೆ 66–ಎ ರಲ್ಲಿ ನಿರ್ದಿಷ್ಟಪಡಿಸಲಾದ (i) ರಿಂದ (iii) ರ ವರೆಗಿನ ಸಂಬಂಧಪಟ್ಟ ಮೂರು ವರ್ಗದ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಹಾಗೂ ವಿವಿಧ ಬೋಧನಾ ಮಾಧ್ಯಮಗಳಿಗೆ ಸರ್ಕಾರದಿಂದ ಅಧಿಸೂಚಿಸಲಾಗುವಂತೆ ಹೆಚ್ಚುವರಿ ಪತ್ರಿಕೆಗಳು ಅಥವಾ ವಿಭಾಗಗಳನ್ನು ಒಳಗೊಂಡಿರಬಹುದಾಗಿದೆ.

## 6. ಆಯ್ಕೆಯ ಮಾನದಂಡ :–

(1) ಆಯ್ಕೆ ಪ್ರಾಧಿಕಾರವು ನೇಮಕಾತಿಗೆ ವಿಷಯವಾರು ಮತ್ತು ಮಾಧ್ಯಮವಾರು ಹಾಗೂ ಪ್ರವರ್ಗವಾರು ಅಧಿಸೂಚಿಸಿದ ಹುದ್ದೆಗಳಿಗೆ ಅನುಸಾರವಾಗಿ ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಪದವಿ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಶೇಕಡವಾರು ಅಂಕಗಳ ಆಧಾರದ ಮೇಲೆ ಈ ಕೆಳಗೆ ವಿವರಿಸಿದಂತೆ ವೇಯಿಟೇಜ್ (Weightage) ಉಪಯೋಗಿಸಿ, ಲೆಕ್ಕಹಾಕಿ Derived percentage ನ ಆಧಾರದ ಮೇಲೆ ಪ್ರತ್ಯೇಕವಾಗಿ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

(ಎ) Derived percentage ಲೆಕ್ಕಹಾಕಲು ಅಭ್ಯರ್ಥಿಯು ಡಿಪ್ಲೋಮಾ ಇನ್ ಎಲಿಮೆಂಟರಿ ಎಜುಕೇಷನ್ ಅಥವಾ ಬಿ.ಇಡಿ, ಡಿಪ್ಲೋಮ ಇನ್ ಸ್ಪೆಷಲ್ ಎಜುಕೇಷನ್ ಅಥವಾ ಬಿ.ಇಡಿ (ಸ್ಪೆಷಲ್ ಎಜುಕೇಷನ್) ವಿದ್ಯಾರ್ಹತೆ ಹೊಂದಿದ್ದಲ್ಲಿ ಈ ಮುಂದಿನಂತೆ ವೇಯಿಟೇಜ್ (Weightage) ಅನ್ನು ಶೇಕಡವಾರು ಪರಿಗಣಿಸುವುದು.

(i) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ 0.50.
(ii) ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ 0.20.
(iii) ಪದವಿಯಲ್ಲಿ ಪಡೆದ ಅಂಕಗಳ 0.20.
(iv) ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳ 0.10.

(ಬಿ) Derived percentage ಲೆಕ್ಕಹಾಕಲು ಅಭ್ಯರ್ಥಿಯು ನಾಲ್ಕು ವರ್ಷಗಳ ಶಿಕ್ಷಕರ ಶಿಕ್ಷಣ ಪದವಿಯನ್ನು ಹೊಂದಿದ್ದಲ್ಲಿ ಈ ಮುಂದಿನಂತೆ ವೇಯಿಟೇಜ್ (Weightage) ಅನ್ನು ಶೇಕಡವಾರು ಪರಿಗಣಿಸುವುದು.

(i) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ 0.50.
(ii) ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ 0.20.
(iii) ನಾಲ್ಕು ವರ್ಷಗಳ ಬಿ.ಎಲ್.ಇಡಿ. ಅಥವಾ ಬಿಎ/ಬಿಎಸ್ಸಿ ಇಡಿ ಅಥವಾ ಬಿಎ.ಇಡಿ. ಬಿಎಸ್ಸಿ.ಇಡಿ ಪದವಿಯಲ್ಲಿ ಪಡೆದ ಅಂಕಗಳ 0.30.

(2) ಮೇಲೆ ಹೇಳಿದ ಪ್ರಕಾರ ವೆಯಿಟೇಜ್‌ನ್ನು ಲೆಕ್ಕ ಹಾಕಿದಾಗ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನ Derived percentage ಅಂಕಗಳನ್ನು ಪಡೆದಲ್ಲಿ ವಯಸ್ಸನ್ನು ಆಧರಿಸಿ ವಯಸ್ಸಿನಲ್ಲಿ ಹಿರಿಯರಾದವನ್ನು ಮೆರಿಟ್ ಪಟ್ಟಿಯಲ್ಲಿ ವಯಸ್ಸಿನಲ್ಲಿ ಕಿರಿಯರಿಗಿಂತ ಮೊದಲು ಪರಿಗಣಿಸುವುದು.

## 7. ಹುದ್ದೆಗಳ ಮೀಸಲಾತಿ:–

ಹುದ್ದೆಗಳ ಮೀಸಲಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 9 ರಲ್ಲಿನ ಪ್ರಮಾಣಾನುಸಾರ ಮತ್ತು ಕಾಲ ಕಾಲಕ್ಕೆ ಹೊರಡಿಸಲಾಗುವ ಕಾನೂನುಗಳು, ನಿಯಮಗಳು, ಹಾಗೂ ಕೆಳಕಂಡ ಜಾರಿಯಲ್ಲಿರುವ ಸರ್ಕಾರದ ಆದೇಶಗಳನ್ನು ಒಳಗೊಂಡಂತೆ ಇರುತ್ತದೆ.

i) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ವ್ಯಕ್ತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ರಾಜ್ಯ ಸರ್ಕಾರದ ಮೀಸಲಾತಿ ನಿಯಮಗಳು;
ii) ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ 2000;
iii) ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು–1977 ನಿಯಮ–9 ಪ್ರಕಾರ ವಿಕಲಚೇತನರು ಹಾಗೂ ಮಾಜಿ ಸೈನಿಕರು, ನಿಗದಿಪಡಿಸಿರುವ ಪ್ರಮಾಣದಲ್ಲಿ;

iv) ಸರ್ಕಾರದ ಅಧಿಸೂಚನೆ ಸಂಖ್ಯೆ: **ಡಿಪಿಎಆರ್ 252 ಎಸ್‌ಆರ್‌ಆರ್ 2020(P-1) ದಿನಾಂಕ: 07.07.2021** ರನ್ವಯ ಯೋಜನಾ ನಿರಾಶ್ರಿತ ಅಭ್ಯರ್ಥಿಗಳಿಗೆ, ನಿಗದಿಪಡಿಸಿದ ಪ್ರಮಾಣದಲ್ಲಿ;

v) ಪ್ರತಿ ಪ್ರವರ್ಗಗಳಲ್ಲಿ ಶೇ. 50 ಕ್ಕಿಂತ ಕಡಿಮೆ ಇಲ್ಲದಂತೆ ಹುದ್ದೆಗಳನ್ನು ಮಹಿಳಾ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು.

ಮತ್ತು

vi) ಪ್ರತಿ ಪ್ರವರ್ಗಗಳಲ್ಲಿ ಶೇ.1 ಕ್ಕಿಂತ ಕಡಿಮೆ ಇಲ್ಲದಂತೆ ಹುದ್ದೆಗಳನ್ನು ತೃತೀಯಲಿಂಗದ (Transgender) ಅಭ್ಯರ್ಥಿಗಳಿಂದ ಭರ್ತಿ ಮಾಡುವುದು.

## ೮. ಆಯ್ಕೆ ಪಟ್ಟಿ:–

(1) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಮುನ್ನ ಆಯ್ಕೆ ಪ್ರಾಧಿಕಾರವು ಅಧಿಸೂಚಿತ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅಧಿಸೂಚಿಸಿದ ಹುದ್ದೆಗಳ ಸಂಖ್ಯೆಯ ಎರಡರಷ್ಟರವರೆಗಿನ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ದಾಖಲಾತಿ ಪರಿಶೀಲನೆ ಉದ್ದೇಶಕ್ಕಾಗಿ ಕರೆಯುವುದು.

(2) ದಾಖಲಾತಿಗಳ ಪರಿಶೀಲನೆಯ ನಂತರ ಆಯ್ಕೆ ಪ್ರಾಧಿಕಾರವು ಅಧಿಸೂಚಿಸಿದ್ದ ಹುದ್ದೆಗಳ ಸಂಖ್ಯೆಗೆ ಸಮನಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

(3) ತದನಂತರ, ತಾತ್ಕಾಲಿಕ ಪಟ್ಟಿಗೆ ಯಾವುದಾದರೂ ಆಕ್ಷೇಪಣೆಗಳು ಸ್ವೀಕೃತಗೊಂಡಲ್ಲಿ ಪರಿಶೀಲಿಸಿ, ಸೂಕ್ತ ಆಕ್ಷೇಪಣೆಗಳಿದ್ದಲ್ಲಿ ಪರಿಗಣಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಮುಖ್ಯ ಪಟ್ಟಿಯನ್ನು ಪ್ರಕಟಿಸುವುದು.

(4) ಆಯ್ಕೆ ಪ್ರಾಧಿಕಾರವು ನೇಮಕಾತಿ ಸಮಯದಲ್ಲಿ ಅಭ್ಯರ್ಥಿಗಳು ಯಾವ ನಿರ್ದಿಷ್ಟ ಹುದ್ದೆಗೆ ಆಯ್ಕೆಯನ್ನು ಬಯಸುತ್ತಾರೊ ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಆಯ್ಕೆಯನ್ನು ಪರಿಗಣಿಸುವುದು.

(5) ಮೇಲ್ಕಂಡ ವಿಧಾನದಲ್ಲಿ ಸಿದ್ದಪಡಿಸಲಾದ ಮುಖ್ಯ ಪಟ್ಟಿಗೆ ಸೇರಲ್ಪಟ್ಟ ಅಭ್ಯರ್ಥಿಗಳನ್ನು ಆಯ್ಕೆಪಟ್ಟಿಯ ಕ್ರಮ ಸಂಖ್ಯೆಯ ಅನುಕ್ರಮವಾಗಿ ಅಗತ್ಯವಿರುವ ಪರಿಶೀಲನೆಯ ನಂತರ ಎಲ್ಲಾ ರೀತಿಯಲ್ಲೂ ಅರ್ಹರಾದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಾಧಿಕಾರದಿಂದ ನೇಮಕಾತಿಗೆ ಪರಿಗಣಿಸುವುದು.

## ೯. ಹೆಚ್ಚುವರಿ ಪಟ್ಟಿ:–

(1) ನೇಮಕಾತಿ ಪ್ರಾಧಿಕಾರವು ನಿಯಮ 8 ರ ಅಡಿಯಲ್ಲಿ ಸಿದ್ಧಪಡಿಸಿದ ಆಯ್ಕೆ ಪಟ್ಟಿಯ ರೀತಿಯಲ್ಲಿ, ಮುಖ್ಯ ಆಯ್ಕೆ ಪಟ್ಟಿಯಲ್ಲಿ ಸೇರಿಸದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕು. ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ನಿರ್ದಿಷ್ಟ ಅಥವಾ ವಿಸ್ತೃತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಸಂದರ್ಭದಲ್ಲಿ ನೇಮಕಾತಿ ಪ್ರಾಧಿಕಾರವು ಈ ರೀತಿ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಬಹುದು. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ಪಟ್ಟಿಯಿಂದ ನೇಮಕಾತಿ ಆದೇಶಗಳನ್ನು ನೀಡಬೇಕಾದ ಅಭ್ಯರ್ಥಿಯು ಅಂತಿಮ ಪಟ್ಟಿಯಲ್ಲಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಅಭ್ಯರ್ಥಿಯು ಸೇರಿದ ಅದೇ ವರ್ಗದ, ನೇರ ಮತ್ತು ಸಮತಳ ಮೀಸಲಾತಿಗೆ ಸೇರಿದ ಅಭ್ಯರ್ಥಿಯಾಗಿರಬೇಕು.

(2) ಉಪನಿಯಮ (1) ರಡಿಯಲ್ಲಿ ಸಿದ್ಧಪಡಿಸಲಾದ ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಬೇಕಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಯು ನಿಯಮ 8 ರ ಅಡಿಯಲ್ಲಿ ತಯಾರಿಸಲಾದ ಪಟ್ಟಿಯಲ್ಲಿ ಸೇರಿದ ಅಭ್ಯರ್ಥಿಗಳ ಒಟ್ಟು ಸಂಖ್ಯೆಯ ಶೇಕಡಾ ಇಪ್ಪತ್ತನ್ನು (20%) ಮೀರಿರಬಾರದು.

(3) ನೇಮಕಾತಿ ಪ್ರಾಧಿಕಾರವು ಉಪ–ನಿಯಮ (1) ರ ಅಡಿಯಲ್ಲಿ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯು ಅದೇ ಹುದ್ದೆಗೆ ಮುಂದಿನ ನೇಮಕಾತಿ ಅಧಿಸೂಚನೆ ಹೊರಡಿಸುವವರೆಗೆ ಅಥವಾ ಪ್ರಕಟಣೆಯ ದಿನಾಂಕದಿಂದ 02 ವರ್ಷ ಅವಧಿ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.

(4) ಒಂದು ವೇಳೆ ನೇಮಕಾತಿ ಪ್ರಾಧಿಕಾರವು ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಆ ಅಭ್ಯರ್ಥಿಯು ನಿಗದಿತ ಸಮಯದೊಳಗೆ ನೇಮಕಗೊಂಡ ಹುದ್ದೆಯ ಜವಾಬ್ದಾರಿಯನ್ನು ವಹಿಸಿಕೊಳ್ಳದಿದ್ದಲ್ಲಿ ಮತ್ತು ಅಂತಹ ಅಭ್ಯರ್ಥಿಯ ಮಟ್ಟಿಗೆ, ಉಪನಿಯಮ (1) ರಂತೆ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಲ್ಲಿರುವ ಅಭ್ಯರ್ಥಿಯನ್ನು ನೇಮಕ ಮಾಡಬಹುದಾಗಿದೆ.

**೧೦. ಅಭ್ಯರ್ಥಿಗಳ ನೇಮಕಾತಿ:–**

(1) ನಿಯಮ 8 ರ ಅಡಿಯಲ್ಲಿ ಸಿದ್ದಪಡಿಸಲಾದ ಮುಖ್ಯ ಪಟ್ಟಿಗೆ ಸೇರಲ್ಪಟ್ಟ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯ ಕ್ರಮ ಸಂಖ್ಯೆಯ ಅನುಕ್ರಮವಾಗಿ ಅಗತ್ಯವಿರುವ ಪರಿಶೀಲನೆಯ ನಂತರ ಎಲ್ಲಾ ರೀತಿಯಲ್ಲೂ ಅರ್ಹರಾದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಾಧಿಕಾರದಿಂದ ನೇಮಕಾತಿಗೆ ಪರಿಗಣಿಸಲಾಗುವುದು.

(2) ನಿಯಮ 8 ರ ಅಡಿಯಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಸೇರಲ್ಪಟ್ಟ ಮಾತ್ರಕ್ಕೆ ಅಭ್ಯರ್ಥಿಯು ನೇಮಕಾತಿಗೆ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.

**೧೧. ಅನ್ವಯವಾಗುವ ಇತರೆ ನಿಯಮಗಳು:–**

ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957, ಕರ್ನಾಟಕ ನಾಗರಿಕ ಸೇವೆಗಳು (ನಡತೆ) ನಿಯಮಗಳು 2021, ಮತ್ತು ಇತರೆ ಎಲ್ಲಾ ನಿಯಮಗಳು, ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ರಾಜ್ಯ ನಾಗರಿಕ ಸೇವಾ ಕಾಯಿದೆ 1978 ರ ಅಡಿಯಲ್ಲಿ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಅಥವಾ ಮಾಡಲಾಗಿದೆ ಎಂದು ಭಾವಿಸಲಾಗಿರುವ (1990 ರ ಕರ್ನಾಟಕ ಕಾಯಿದೆ 14) ಅಂತಹ ನಿಯಮಗಳು ಈ ನಿಯಮಗಳ ನಿಬಂಧನೆಗಳಿಗೆ ಅಸಮಂಜಸವಾಗಿರದಿದ್ದಲ್ಲಿ ಈ ನಿಯಮಗಳ ಅಡಿಯಲ್ಲಿ ಆಯ್ಕೆ ಮಾಡಿದ ಮತ್ತು ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯಿಸುತ್ತದೆ.

*****

## ಶೆಡ್ಯೂಲ್ (Schedule)

| ಹುದ್ದೆಯ ವರ್ಗ ಮತ್ತು ವೇತನ ಶ್ರೇಣಿ | ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ | ಕನಿಷ್ಟ ವಿದ್ಯಾರ್ಹತೆ |
|---|---|---|
| **ಪದವೀಧರ ಪ್ರಾಥಮಿಕ ಶಿಕ್ಷಕ 6 ರಿಂದ 8 ನೇ ತರಗತಿ ವೇತನ ಶ್ರೇಣಿ: (Rs. 27,650-52,650)** | 15,000 (ಇತರೆ. 10,000 + ಕಲ್ಯಾಣ ಕರ್ನಾಟಕ 5,000) | (1) ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ. 50 ಅಂಕಗಳೊಂದಿಗೆ ಪದವಿ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ 2 ವರ್ಷಗಳ ಡಿಪ್ಲೋಮಾ ಅಥವಾ ಡಿಪ್ಲೋಮಾದಲ್ಲಿ ವಿಶೇಷ ಶಿಕ್ಷಣ<br>**ಅಥವಾ**<br>ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ. 50 ಅಂಕಗಳೊಂದಿಗೆ ಪದವಿ ಹಾಗೂ ಶಿಕ್ಷಣ ವಿಷಯದಲ್ಲಿ ಅಥವಾ ವಿಶೇಷ ಶಿಕ್ಷಣದಲ್ಲಿ ಪದವಿ:<br>**ಅಥವಾ**<br>ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ. 50 ಅಂಕಗಳೊಂದಿಗೆ ಪದವಿ ಪೂರ್ವ ಶಿಕ್ಷಣ ಹಾಗೂ 4 ವರ್ಷಗಳ ಪ್ರಾಥಮಿಕ ಶಿಕ್ಷಣ |

ವಿಷಯದಲ್ಲಿ ಪದವಿ ಅಥವಾ 4 ವರ್ಷಗಳ ಶಿಕ್ಷಣ ವಿಷಯದಲ್ಲಿ ಪದವಿ.

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಗಳಲ್ಲಿನ ಪ್ರವರ್ಗ–1 ಅಥವಾ ಅಂಗವಿಕಲ ಅಭ್ಯರ್ಥಿಗಳ ನೇಮಕಾತಿಗಾಗಿ ಅಂಕಗಳನ್ನು ಪದವಿ ಅಥವಾ ಪದವಿಪೂರ್ವ ಶಿಕ್ಷಣದಲ್ಲಿ ಕನಿಷ್ಟ (ಸರಾಸರಿ) ಶೇ 45 ರಷ್ಟು ನಿಗದಿಪಡಿಸಿದೆ.

**ಮತ್ತು**

(2) ಭಾರತ ಸರ್ಕಾರ ಅಥವಾ ಕರ್ನಾಟಕ ಸರ್ಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣತೆ.

**<u>ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ) ಭಾಷಾ ವಿಷಯದ ಹುದ್ದೆಗಳಿಗಾಗಿ ಅಭ್ಯರ್ಥಿಯು ಹೊಂದಿರಬೇಕಾದದ್ದು :–</u>**

(a) ಸಂಬಂಧಿಸಿದ ಭಾಷೆಯನ್ನು. ಮತ್ತು ಕೆಳಗಿನ ಯಾವುದಾದರೂ ಒಂದು ವಿಷಯವನ್ನು (ಸಂಬಂಧಿಸಿದ ಭಾಷಾ ವಿಷಯಗಳನ್ನು ಹೊರತುಪಡಿಸಿ) ಪದವಿಯ ಮೂರು ವರ್ಷವೂ ಐಚ್ಛಿಕ ವಿಷಯವಾಗಿ ಅಭ್ಯಾಸ ಮಾಡಿರಬೇಕು. **ಅವುಗಳೆಂದರೆ,** ಕನ್ನಡ/ಆಂಗ್ಲ/ಹಿಂದಿ/ಮರಾಠಿ/ಉರ್ದು/ತೆಲುಗು/ತಮಿಳು/

ಮಲೆಯಾಳಂ/ಕೊಂಕಣಿ/ಸಂಸ್ಕೃತ/ಇತಿಹಾಸ/ಅರ್ಥಶಾಸ್ತ್ರ/ರಾಜ್ಯಶಾಸ್ತ್ರ /ಭೂಗೋಳಶಾಸ್ತ್ರ/ಸಮಾಜಶಾಸ್ತ್ರ.

(b) ಪದವಿಯಲ್ಲಿ ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ.50 ರಷ್ಟು ಅಂಕಗಳನ್ನು ಪಡೆದಿರಬೇಕು

**ಮತ್ತು**

ಶಿಕ್ಷಕ ಶಿಕ್ಷಣದಲ್ಲಿ ಡಿಪ್ಲೋಮಾ ಅಥವಾ ಪದವಿಯಲ್ಲಿ ಸಂಬಂಧಪಟ್ಟ ಭಾಷಾ ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/Method of Teaching) ಅಭ್ಯಾಸ ಮಾಡಿರಬೇಕು.

**ಪದವೀಧರ ಪ್ರಾಥಮಿಕ ಶಿಕ್ಷಕ (ಗಣಿತ & ವಿಜ್ಞಾನ) ಹುದ್ದೆಗಳಿಗೆ ಅಭ್ಯರ್ಥಿಗಳು ಹೊಂದಿರಬೇಕಾದದ್ದು;**

(a) ಪದವಿಯಲ್ಲಿ ಗಣಿತ, ಭೌತಶಾಸ್ತ್ರ ವಿಷಯಗಳನ್ನು ಐಚ್ಛಿಕ ವಿಷಯವಾಗಿ ಮೂರು ವರ್ಷ ಕಡ್ಡಾಯವಾಗಿ ಅಭ್ಯಾಸ ಮಾಡಿದ ಪದವೀಧರರು ಈ ವಿಷಯಗಳ ಜೊತೆಗೆ ಕೆಳಗಿನ ಯಾವುದಾದರು ಒಂದು ವಿಷಯವನ್ನು ಐಚ್ಛಿಕ ವಿಷಯವನ್ನಾಗಿ 3ನೇ ವಿಷಯವಾಗಿ ಪದವಿಯಲ್ಲಿ ಅಭ್ಯಾಸ ಮಾಡಿರಬೇಕು. ರಸಾಯನಶಾಸ್ತ್ರ/ಗಣಕಶಾಸ್ತ್ರ/ಎಲೆಕ್ಟ್ರಾನಿಕ್ಸ್/ಸಂಖ್ಯಾಶಾಸ್ತ್ರ/ ಭೂಗರ್ಭಶಾಸ್ತ್ರ

| | | |
|---|---|---|
| | | ಅಥವಾ<br><br>ವಾಸ್ತುಶಿಲ್ಪದ ಪದವೀಧರರಲ್ಲದ ಇಂಜಿನಿಯರಿಂಗ್ ಪದವೀಧರರು ಪ್ರಥಮ ಮೂರು /ನಾಲ್ಕು ಸೆಮಿಸ್ಟರ್‌ಗಳಲ್ಲಿ ಗಣಿತ ಮತ್ತು ಉಳಿದ ಸೆಮಿಸ್ಟರ್‌ಗಳಲ್ಲಿ ಅನ್ವಯಿಕ ಗಣಿತ ಅಭ್ಯಾಸ ಮಾಡಿರಬೇಕು.<br><br>(b) ಪದವೀಧರರು ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ.50 ರಷ್ಟು ಅಂಕಗಳನ್ನು ಪಡೆದಿರಬೇಕು/ ಇಂಜಿನಿಯರಿಂಗ್ ಪದವೀಧರರು ಪ್ರತ್ಯೇಕವಾಗಿ ಗಣಿತ ಮತ್ತು ಅನ್ವಯಿಕ ಗಣಿತ ವಿಷಯದಲ್ಲಿ ಕನಿಷ್ಟ (ಸರಾಸರಿ) ಶೇ 50 ರಷ್ಟು ಅಂಕಗಳನ್ನು ಒಟ್ಟಾರೆ ಗಳಿಸಿರಬೇಕು<br><br>ಮತ್ತು<br><br>(c) ಮೇಲಿನ ಮೂರು ವಿಷಯಗಳ ಪೈಕಿ ಕನಿಷ್ಟ ಒಂದು ವಿಷಯದಲ್ಲಿ ಶಿಕ್ಷಕ ಶಿಕ್ಷಣದಲ್ಲಿ ಡಿಪ್ಲೋಮಾ ಅಥವಾ ಪದವಿ ಯಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/Method of Teaching) ಅಭ್ಯಾಸ ಮಾಡಿರಬೇಕು<br><br>**<u>ಪದವೀಧರ ಪ್ರಾಥಮಿಕ ಶಿಕ್ಷಕ (ಜೀವ ವಿಜ್ಞಾನ) ಹುದ್ದೆಗಾಗಿ:-</u>**<br><br>(ಈ ಹುದ್ದೆಗಳು ಒಂದಕ್ಕಿಂತ ಅಧಿಕ ವಿಜ್ಞಾನ ಹುದ್ದೆಗಳನ್ನು ಹೊಂದಿರುವ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಅನುಸಾರ ಹುದ್ದೆಗಳನ್ನು ಹೊಂದಬಹುದು)<br><br>ಈ ಹುದ್ದೆಗೆ ಅಭ್ಯರ್ಥಿಗಳು ಹೊಂದಿರಬೇಕಾದದ್ದು:-<br><br>(a) ಪದವಿಯಲ್ಲಿ ರಸಾಯಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಮೂರು ವರ್ಷವೂ ಕಡ್ಡಾಯವಾಗಿ ಅಭ್ಯಾಸ ಮಾಡಿದ ಪದವೀಧರರು ಮತ್ತು ಈ ವಿಷಯದ ಜೊತೆಗೆ ಕೆಳಗಿನ ಯಾವುದಾದರೂ ಎರಡು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಪದವಿಯಲ್ಲಿ ಮೂರು ವರ್ಷ ಅಭ್ಯಾಸ ಮಾಡಿರಬೇಕು. ಅವುಗಳೆಂದರೆ:-<br><br>ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ರೇಷ್ಮೆಕೃಷಿ/ಪರಿಸರವಿಜ್ಞಾನ/ತಳಿಶಾಸ್ತ್ರ/ ಜೈವಿಕ ತಂತ್ರಜ್ಞಾನ/ಸೂಕ್ಷ್ಮ ಜೀವಿಶಾಸ್ತ್ರ.<br><br>(b) ಪದವಿಯಲ್ಲಿ ಒಟ್ಟಾರೆಯಾಗಿ ಕನಿಷ್ಟ (ಸರಾಸರಿ) ಶೇ.50 ರಷ್ಟು ಅಂಕಗಳನ್ನು ಪಡೆದಿರುವ ಪದವೀಧರರು<br><br>**ಮತ್ತು**<br><br>(c) ಶಿಕ್ಷಕ ಶಿಕ್ಷಣ ವಿಷಯದಲ್ಲಿ ಡಿಪ್ಲೋಮಾ ಅಥವಾ ಪದವಿಯಲ್ಲಿ ಈ ಮೂರು ವಿಷಯಗಳ ಪೈಕಿ ಕನಿಷ್ಟ ಒಂದು ವಿಷಯದಲ್ಲಿ |

ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/Method of Teaching) ಅಭ್ಯಾಸ ಮಾಡಿರಬೇಕು

**ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ) :– (ಸಮಾಜ ಪಾಠಗಳು) ಹುದ್ದೆಗಾಗಿ ಅಭ್ಯರ್ಥಿಗಳು ಹೊಂದಿರಬೇಕಾದದ್ದು:–**

(a) ಮೂರು ವರ್ಷಗಳ ಪದವಿಯಲ್ಲಿ ಈ ಕೆಳಗಿನ ಯಾವುದಾದರೂ ಎರಡು ವಿಷಯಗಳನ್ನು ಐಚ್ಚಿಕ ವಿಷಯಗಳಾಗಿ ಅಭ್ಯಾಸ ಮಾಡಿರಬೇಕು.

ಸಮಾಜ ಪಾಠ ಸಮೂಹ ವಿಷಯಗಳಾದ ಇತಿಹಾಸ/ಅರ್ಥಶಾಸ್ತ್ರ/ಭೂಗೋಳಶಾಸ್ತ್ರ/ರಾಜ್ಯಶಾಸ್ತ್ರ ಇವುಗಳ ಪೈಕಿ ಯಾವುದಾದರೂ ಎರಡು ವಿಷಯಗಳನ್ನು ಐಚ್ಚಿಕ ವಿಷಯಗಳಾಗಿ ಅಭ್ಯಾಸ ಮಾಡಿರಬೇಕು.

**ಅಥವಾ**

(b) ಪದವಿಯಲ್ಲಿ ಸಮಾಜ ಪಾಠ ಸಮೂಹ ವಿಷಯಗಳಾದ ಇತಿಹಾಸ/ಅರ್ಥಶಾಸ್ತ್ರ / ಭೂಗೋಳಶಾಸ್ತ್ರ / ರಾಜ್ಯಶಾಸ್ತ್ರ / ಸಮಾಜಶಾಸ್ತ್ರಗಳ ಪೈಕಿ ಒಂದು ವಿಷಯವನ್ನು ಐಚ್ಚಿಕ ವಿಷಯವನ್ನಾಗಿ ಮೂರು ವರ್ಷಗಳು ಅಭ್ಯಾಸ ಮಾಡಿರಬೇಕು ಮತ್ತು ಭಾಷಾ ಸಮೂಹ ವಿಷಯಗಳಾದ ಕನ್ನಡ/ಆಂಗ್ಲ/ಹಿಂದಿ/ಮರಾಠಿ/ಉರ್ದು/ತೆಲುಗು/ತಮಿಳು/ಕೊಂಕಣಿ/ಮಲೆಯಾಳಂ/ಸಂಸ್ಕೃತ ಇವುಗಳ ಪೈಕಿ ಒಂದು ಭಾಷೆ ಅಭ್ಯಾಸ ಮಾಡಿರಬೇಕು.

(c) **ಪದವಿಯಲ್ಲಿ ಒಟ್ಟಾರೆಯಾಗಿ ಕನಿಷ್ಟ** (ಸರಾಸರಿ) **ಶೇ.50 ರಷ್ಟು ಅಂಕಗಳನ್ನು ಪಡೆದಿರಬೇಕು**

**ಮತ್ತು**

(d) ಶಿಕ್ಷಕ ಶಿಕ್ಷಣ ವಿಷಯದಲ್ಲಿ ಡಿಪ್ಲೋಮಾ ಅಥವಾ ಪದವಿಯಲ್ಲಿ ಸಮಾಜ ಪಾಠ ಸಮೂಹ ವಿಷಯಗಳ ಪೈಕಿ ಕನಿಷ್ಟ ಪಕ್ಷ ಒಂದು ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/Method of Teaching) ಅಭ್ಯಾಸ ಮಾಡಿರಬೇಕು.

(e) ಶಾಲಾ ಪಠ್ಯವಸ್ತುವಿನಲ್ಲಿ ಅಳವಡಿಸಿಕೊಂಡಿರುವ ಕನಿಷ್ಠ ಎರಡು ವಿಷಯಗಳನ್ನು ಪದವಿಯಲ್ಲಿ ಐಚ್ಛಿಕವಾಗಿ ಅಭ್ಯಾಸ ಮಾಡಿರುವುದನ್ನು ಪರಿಗಣಿಸಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

| | | |
|---|---|---|
| | | ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಪರಿಷತ್ತಿನ (National Council for Teacher Education) ವ್ಯಾಪ್ತಿಯ ನಿಯಮಗಳಿಂದ ಕಾಲ ಕಾಲಕ್ಕೆ ಸೂಚಿಸಲಾದ ಯಾವುದೇ ಹೆಚ್ಚಿನ ಅಥವಾ ಹೆಚ್ಚುವರಿ ವಿದ್ಯಾರ್ಹತೆ.<br><br>**ಸೂಚನೆ**:–<br><br>ಈ ನಿಯಮಾವಳಿ ಉದ್ದೇಶಗಳಿಗಾಗಿ:–<br>(i) ಶಿಕ್ಷಕ ಶಿಕ್ಷಣ ವಿಷಯದಲ್ಲಿ 4 ವರ್ಷಗಳ ಸಂಯೋಜಿತ ಪದವಿ ಪಡೆದಿರುವ ಅಭ್ಯರ್ಥಿಗಳು ಆಯಾ ಹುದ್ದೆಗೆ ನಿಗದಿಪಡಿಸಿರುವ ವಿಷಯಗಳನ್ನು ಐಚ್ಛಿಕ ವಿಷಯಗಳಾಗಿ ಅಭ್ಯಾಸ ಮಾಡಿದವರಿಗೆ ಮೂರು ವರ್ಷಗಳ ಪದವಿ ಅಭ್ಯಾಸದಿಂದ ವಿನಾಯ್ತಿ ನೀಡಲಾಗಿದೆ.<br>(ii)ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಪರಿಷತ್ತಿನಿಂದ (NCTE) ಅಂಗೀಕೃತಗೊಂಡ ಪ್ರಾಥಮಿಕ ಶಿಕ್ಷಣ ವಿಷಯದಲ್ಲಿ ಪದವಿ ಅಥವಾ ಡಿಪ್ಲೋಮಾ ಅಥವಾ ಶಿಕ್ಷಣದಲ್ಲಿ ಪದವಿಯನ್ನು ಮಾತ್ರ ಪರಿಗಣಿಸುವುದು.<br><br>(iii) ವಿಶೇಷ ಶಿಕ್ಷಣ (Special Education) ಪದವಿ ಪಡೆದಿದ್ದಲ್ಲಿ ರಿಹ್ಯಾಬಿಲಿಟೇಶನ್ ಕೌನ್ಸಿಲ್ ಆಫ್ ಇಂಡಿಯಾದಿಂದ RCI-(Rehabilitation Council Of India) ಮಾನ್ಯತೆ ಪಡೆದಿರಬೇಕು. |

*ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ*
*ಮತ್ತು ಅವರ ಹೆಸರಿನಲ್ಲಿ,*

***(ಹೆಚ್. ಎಸ್. ಶಿವಕುಮಾರ್)***
*ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ),*
*ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ.*

## GOVERNMENT OF KARNATAKA

**No: EP 89 PBS 2021 (Part-1)**

Karnataka Government Secretariat,
6th Floor, M.S.Building,
Bangalore, Dated: 22-02-2022.

### NOTIFICATION

The draft of the Karnataka Education Department Services (Department of Public Instructions) (Recruitment) (Special) Rules 2022, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published on 21st Jan 2022 as required by clause (a) of sub-section (2) of section 3 of the said Act, for the information of all the persons likely to be affected thereby and notice was given that the said draft will be taken into consideration after fifteen days from the date of its publication in the official Gazette. After its publication in the Official Gazette the suggestions and objections received from the affected persons and general public have been examined and considered.

Now, therefore in exercise of the powers, Karnataka Education Department Services (Department of Public Instructions) (Recruitment) Rules,1967, which the Government of Karnataka proposes to make the amendment conferred by sub section (1) of section 3 read with section 8 of the Karnataka State Civil Services Act, 1978 (Karnataka Act 14 of 1990), hereby makes the following rules , namely:-

### SPECIAL RULES

**1. Title, commencement and application.-** (1) These rules may be called the Karnataka Education Department Services (Department of Public Instructions) (Recruitment) (Special) Rules, 2022.

(2) They shall come into force from the date of their final publication in the Official Gazette.

(3) Notwithstanding anything contained in the Karnataka Civil Services (General Recruitment) Rules, 1977 or in the Karnataka Education Department Services (Department of Public Instructions) (Recruitment) Rules, 1967 or any other rules of recruitment relating to the categories of posts specified in the Schedule made or deemed to have been made under the Karnataka State Civil Services Act, 1978 (Karnataka Act 14 of 1990):

Provided that, nothing in these rules shall apply to more than one recruitment.

**2. Definitions.-** (1) In these rules unless the context otherwise requires,-

(a) "Selection and Appointing Authority" means, the Deputy Director of public instructions of the respective educational districts;

(b) "Examination Authority" means, the Centralised Admission cell, K.G Road, Bengaluru Constituted under Government Order No. No.ED 399 PBS 2017(2) dated :22.08.2017

(c) "Qualifying Examination" means, the minimum qualification for recruitment to the post specified in the schedule;

(d) "Schedule" means a Schedule appended to these rules; and

(e) "Vacancies" means the number of vacant posts as specified in the schedule to be filled up under these rules.

(2) Words and expressions used but not defined in these rules shall have the same meaning assigned to them in the Karnataka Civil Services (General Recruitment) Rules, 1977 or in the Karnataka Education Department Services (Department of Public Instructions) (Recruitment) Rules, 1967.

**3. Age Limit.-** Candidate must have attained the age of 21 years and must not have exceeded the age of:

(i) Forty-Seven years in case of a candidate belonging to the Scheduled Caste or Scheduled Tribe or category-I or a candidate belonging to the category of persons with disability.

(ii) Forty-Five years in case of a candidate of other Backward Classes namely;-

(a) Category IIA;

(b) IIB;

(c) IIIA; and

(d) IIIB.

(iii) Forty Two Years in others.

Provided that, relaxation of age limit provided in sub-rule (2) and (3) of rule 6 of the Karnataka Civil Services (General Recruitment) Rules, 1977 shall apply for recruitment under these rules.

**4. Examination Authority.-** The Centralised Admission Cell, Bengaluru being the Examination Authority is functioning under an advisory committee consisting of,-

(i) The Commissioner for Public Instruction - Chairperson;

(ii) The Director (Primary Education) of Public Instruction - Member;

(iii) The Director (Secondary Education) of Public Instruction - Member;

(iv) The Director, Department of State Educational Research and Training - Member;

(v) The Special Officer, Centralised Admission Cell - Member Secretary;

(vi) The State Informatics Officer, NIC, Bengaluru - Member;

(vii) The Deputy Director(Primary Education), Commissioner's Office, Bengaluru - Member; and

(viii) Two Principals from DIET and two DDPIs from Educational Districts nominated by The Commissioner - Members.

**5. Mode of Recruitment.-** (1) The selection of candidates under these rules shall be made by the Selection Authority in the manner specified below.

(a) The Deputy Director of Public Instruction of the respective educational district or such other officers as the State Government may by order specify in this behalf (hereinafter referred to as the selection authority) after taking into consideration number of vacancies available in the concerned educational district for each of the categories of post specified in **serial number 66-A, at item (i) to (iii) of column (2) of the schedule to the Karnataka Education Department Services (Department of Public Instructions) (Recruitment) Rules, 1967** and mediums of instructions shall give wide publicity by publishing the Notification in the Official Gazette and also advertising in at least two leading newspapers having wide circulation In the state inviting eligible candidates to apply in the form and manner specified for the purpose along with such fees as may be specified therein for the purpose of recruitment under these rules.

(b) The Selection Authority with the assistance of the Examination Authority shall conduct a competitive examination in accordance with the procedure to be specified by the Government. The Selection Authority shall provide all necessary details in respect of competitive examination such as syllabus, the date, time and place, etc. in the notification.

(c) The competitive examinations for the respective three categories of post specified at **serial number 66-A, at item (i) to (iii) of column (2) of the schedule to the Karnataka Education Department Services (Department of Public Instructions) (Recruitment) Rules, 1967** and for different mediums of instructions may contain additional papers or sections as may be notified by the Government.

**6. Selection Criteria.-** (1) The Selection Authority shall from out of the list of eligible candidates prepare in the order of merit separate lists of candidates for each of the categories of posts belonging to notified subjects and mediums of instruction on the basis of derived percentages of marks secured in competitive examination, Teacher Eligibility Test, Graduate Degree Course and Teacher Education course with following weightages in the following manner, namely:-

(a) In case of a candidate with Diploma in Elementary Education or Bachelor in Education or Diploma in Special Education or Bachelor in Special Education, the weightages shall be as follows, namely:-

(i) 0.50 for percentage of marks secured in the competitive examination;

(ii) 0.20 for percentage of marks secured in the Teacher Eligibility Test;

(iii) 0.20 for percentage of marks secured in the Graduate Degree; and

(iv) 0.10 for percentage of marks secured in the Teacher Education course.

(b) In case of a candidate having Four-Year Graduate Degree in Teacher Education Course,

(i) 0.50 for percentage of marks secured in the Competitive Examination;
(ii) 0.20 for percentage of marks secured in the Teacher Eligibility Test;

(iii) 0.30 for percentage of marks secured in the four year B.El.Ed. Or B.A/BSc.Ed Or BA.Ed Or BSc.Ed. Graduate Degree.

(2) If the derived percentage after applying the above weightages for two or more candidates are equal, the order of merit in respect of such candidates shall be fixed on the basis of their age, the elder in age being placed above the younger.

**7. Reservation of Posts.-** The reservation of posts shall be in accordance with the norms and extent provided under rule 9 of the Karnataka Civil Service (General Recruitment) Rules, 1977, extant orders of the Government and extant laws, including the following.

(i) current orders of the State Government relating to reservation of posts for the persons belonging to scheduled castes, scheduled tribes and other backward classes;
(ii) provisions of the Karnataka Reservation of posts (in the Civil Services of the State) for rural candidates Act, 2000;
(iii) norms and extent specified under rule 9 of the Karnataka Civil Service (General Recruitment) Rules, 1977 for reservation for persons with bench mark disability and ex-service men;
(iv) norms and extent specified in Government notification No. DPAR.252.SRR.2020(P-1). dated: 07-07-2021 for persons rehabilitated under project scheme;
(v) not less than fifty percent of the vacancies shall be filled up by women candidates in each category; and
(vi) not less than one percent of the vacancies shall be filled up by the transgender candidates in each category.

**8. Selection List.-** (1) Before publishing the provisional list of selected candidates, the selection authority may call candidates in order of merit for purpose of verification of records up to two times of the number of notified posts.

(2) After verification of records, the selection authority shall publish a provisional list consisting of candidates equal to the number of vacancies notified.

(3) Thereafter, the main list of selected candidates equal to the number of vacancies notified shall be published after considering objections, if any received, to the provisional list.

(4) The Selection Authority shall as far as possible consider the option exercised by the candidate with regard to selection to a particular category of post at the time of recruitment.

(5) Candidates whose names are included in the main list prepared in the manner indicated above may be appointed by the Appointing Authority in the vacancies in the order in which their names are arranged in the list, after satisfying itself after such enquiry as may be considered necessary that each of the candidate is suitable in all respects for appointment.

**9. Additional Selection List.- (1) The appointing authority shall, in the manner the selection list is prepared under rule 8, prepare an additional list of candidates not included in the selection list. The appointing authority may issue orders of appointment to the candidates from the additional list prepared by it, to the extent the candidates from the final list do not report to duty within the specified or extended period of joining time. In such a case, a candidate to be issued orders of appointment from the additional list shall belong to the same category of vertical and horizontal reservation to which the candidate who did not report for duty belonged.**

**(2) The total number of candidates to be included in an additional list prepared under clause (1) shall not exceed twenty percent of the total number of the candidates included in the list prepared under rule 8.**

**(3) An additional list prepared by the Appointing Authority under sub-rule (1) shall cease to be operative for a period of two years from the date of its publication or on or before the date of publication of a list prepared on the basis of next selection whichever is earlier.**

**(4) The candidate whose names are included in the additional list prepared under sub-rule (1) may be similarly appointed only in case and to the extent of candidate whose names are included in the final list and to whom order of appointment has been issued do not assume charge of the post to which they are appointed by the appointing authority within the joining time prescribed.**

**10. Appointment of Candidates.-** (1) Candidates whose names are included in the list prepared under rule 8 may be appointed by the appointing authority in the vacancies in the order in which their names are found in the list after satisfying itself after such enquiry as it may consider necessary that each of the candidates is suitable in all respects for appointment.

(2) The inclusion of name of a candidate in the list published under rule 8 shall not confer any right of appointment.

**11. Application of Other rules.-** The Karnataka Civil Services (Classification, Control and Appeal) Rules, 1957, the Karnataka Civil Services (Conduct) Rules, 2021 and all other rules for the time being in force regulating the conditions of service of Government Servants made or deemed to have been made under the Karnataka State Civil Services Act, 1978 (Karnataka Act 14 of 1990) in

so far as such rules are not inconsistent with the provisions of these rules shall be applicable to the selection made and to the persons appointed under these rules.

## SCHEDULE

| Category of post and scale of pay | No. of posts to be filled | Minimum qualification |
|---|---|---|
| Graduate Primary Teacher for class 6 to 8<br>Pay Scale: (Rs. 27650-52650) | 15,000<br><br>{Others 10000<br>+<br>Kalyana Karnataka 5000} | (1) Graduate Degree with minimum fifty percent of aggregate marks and two year Diploma in elementary education/ Diploma in Special Education.<br>Or<br>Graduate Degree with minimum fifty percent of aggregate marks and Bachelor in Education or Bachelor in Special Education;<br>Or<br>PUC with minimum fifty percent of aggregate marks and four year Bachelor of Elementary Education or four year Bachelor of Education:<br><br>Provided that, in case of a candidate belonging to the Scheduled Caste or Scheduled Tribe or Category-I of Other Backward Classes or a candidate belonging to the category of person with disability the above requirement of marks in Graduate Degree or PUC shall be minimum forty-five percent;<br>And<br>(2) Pass in Teacher Eligibility Test conducted by the Government of Karnataka or Government of India<br><br>**For the post of Graduate Primary Teacher (Language),** a candidate must have,-<br>(a) studied both the concerned language and also one of the following subjects (other than the concerned language) as optional subjects for three years in the Graduate degree namely, Kannada/English/Hindi/Marathi/Urdu/Telugu/Ta |

| | | |
|---|---|---|
| | | mil/Malyalam/Konkani/Sanskrit/History/Economics/ Political Science/ Geography/ Sociology;<br><br>(b) Graduates must have scored minimum fifty percent of aggregate marks in graduation<br>**and**<br>Done Practice teaching/ method of teaching at least in the concerned language in Diploma or Bachelor Degree course in Teacher Education.<br><br>**For post of Graduate Primary Teacher (Mathematics and Science),** candidates shall be :<br>(a) Graduate who have studied mathematics, Physics compulsorily for three years in the Graduate degree along with Chemistry/Computer Science/ Electronics/ Statistics/Geology as the third optional subject for three years in the Graduate degree.<br><br>Or<br><br>Engineering Graduates other than Graduates in Architecture who have studied Mathematics in First Three/Four Semesters and Applied Mathematics in rest of the Semesters.<br><br>(b)Graduates must have scored minimum Fifty percent of aggregate marks in graduation. Engineering Graduates must have scored minimum of Fifty Percent aggregate marks in Mathematics and Applied Mathematics separately;<br>and<br><br>(c) done practice teaching/ method of teaching at least in one of these three subjects in Diploma or Bachelor Degree course in Teacher Education.<br><br>**For the post of Graduate Primary Teacher (Biological Sciences**) (These posts shall be existent in the Schools allotted with more than one Science and Mathematics post based on the defined Pupil : Teacher ratio. In such instances the second post shall be of the above nomenclature), candidates shall be :<br><br>(a) Graduates who have studied Chemistry compulsorily for three years in the Graduate degree and any of the two subjects from among |

| | | |
|---|---|---|
| | | Botany/Zoology/Sericulture/Environmental Science/Genetics/Biotechnology /Microbiology for three years in the Graduate degree.<br><br>(b) Graduates shall have scored minimum Fifty percent of aggregate marks in graduation.<br>and<br><br>(c) done practice teaching/ method of teaching at least in one of these three subjects in Diploma or Bachelor Degree course in Teacher Education.<br><br>**For post of Graduate Primary Teacher (Social Studies**), a candidate shall have:<br>Studied two subjects as optional subjects for three years in the Graduate Degree as detailed below:<br><br>(a)Either both subjects from Social Studies group of History/Economics/ Geography/ Political Science.<br>Or<br>(b)one subject from Social Studies group of History/Economics/Geography/PoliticalScience/ Sociology and one subject from Language group of Kannada/ English/ Hindi/ Marathi/ Urdu/ Telugu/ Tamil/ Konkani/Sanskrit/Malyalam.<br><br>and<br>(c)Graduates shall have scored minimum Fifty percent of aggregate marks in graduation<br>and<br>(d) done practice teaching/ method of teaching at least in one of the subjects in Social Studies group in Diploma or Bachelor Degree course in Teacher Education.<br>(e) It is integrated in the rules to consider the two subjects in the school curriculum which is studied optionally in the Degree.<br><br>Any other Higher or additional qualification prescribed by extant regulations of National Council for Teacher Education.<br><br>**Note:**<br>For the purposes of these rules,<br>(i) For candidates with Integrated Four-year Bachelor Degree in Teacher Education, the requirement of study of relevant subjects as optional subjects will be without the requirement of study for three years. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| | | (ii) A Diploma or Bachelor Degree course in Elementary Education or Bachelor Degree course in Education recognized by the National Council for Teacher Education (NCTE) only shall be considered.<br>(iii) A Degree course in Special Education of teachers has to recognized by the Rehabilitation council of India (RCI). |

***By Order and in the Name of***
***The Governor of Karnataka,***

***(H. S. SHIVAKUMAR)***
*Under Secretary to Government (Primary),*
*Department of Primary and Secondary Education*

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE